**1051 ಶ್ರೀ ವಿಶ್ವನಾಥ ಎಸ್.ಆರ್ (ಯಲಹಂಕ)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಸಿ–ದರ್ಜೆ ಹುದ್ದೆಗಳ ಸಂಖ್ಯೆ ಎಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು);

ಆ) ಅದರಲ್ಲಿ ನೇರ ನೇಮಕಾತಿ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಅನುಕಂಪದ ಅಥವಾ ಇತರೆ ಪ್ರಕರಣಗಳಲ್ಲಿ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)?

**ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು)** :

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಸಿ–ದರ್ಜೆ ಹುದ್ದೆಗಳು ಒಟ್ಟು 75 ಇರುತ್ತದೆ. ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿವರ | ಖಾಲಿ ಹುದ್ದೆಗಳು | ನೇರ ನೇಮಕಾತಿ ಹುದ್ದೆಗಳು |
|---|---|---|---|
| 1 | ಪ್ರ.ದ.ಸ/ಪ್ರ.ದ.ರಾ.ನಿ | 27 | 27 |
| 2 | ದ್ವಿ.ದ.ಸ | -- | -- |
| 3 | ಗ್ರೂಪ್–ಡಿ | -- | -- |
| 4 | ವಾಹನ ಚಾಲಕರು | -- | -- |
| 5 | ಗ್ರಾಮಲೆಕ್ಕಿಗರು | 48 | 48 |
| | **ಒಟ್ಟು** | **75** | **75** |

ಆ) ಖಾಲಿ ಹುದ್ದೆಗಳಲ್ಲಿ ನೇರ ನೇಮಕಾತಿ ಹುದ್ದೆಗಳು 75.

ಇ) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಯಾವುದೇ ಹುದ್ದೆ ಮೀಸಲಿಟ್ಟಿರುವುದಿಲ್ಲ. ಆದಾಗ್ಯೂ ಅನುಕಂಪ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿಗಳು ಬಂದಾಗ, ನೇರ ನೇಮಕಾತಿಗೆ ಮೀಸಲಿಟ್ಟ ಖಾಲಿ ಹುದ್ದೆಗಳಿಗೆ ಭರ್ತಿ ಮಾಡಿದಲ್ಲಿ ಸ್ಥಳ ನಿಯುಕ್ತಿ ಮಾಡಲಾಗುವುದು.